

## ಕೆರೆಯ ಜಲಧರ್ಮ

‘ನಮ್ಮೂರ ಕೆರೆಯ ಜಲಧರ್ಮ’ (ಶಿವಾನಂದ ಕಳವೆ, ಅ. 7) ಲೇಖನ ಪರಿಸರ ಪ್ರಜ್ಞೆ ಬೆಳೆಸುವುದಕ್ಕೆ ಪ್ರೇರಣೆಯಾಗಿದೆ. ಅಂತರ್ಜಲ ಬತ್ತಿ ಹೋಗುತ್ತಿದೆ ಎಂದು ಆತಂಕಪಡುವ ಅಗತ್ಯವಿಲ್ಲ, ಬತ್ತಿದ ಕೆರೆಗಳಿಗೆ ಮರುಜೀವ ಕೊಡುವಂಥ ಮನಸ್ಸುಗಳು ಸೃಷ್ಟಿಯಾಗಬೇಕು ಎನ್ನುವುದನ್ನು ಲೇಖಕರು ಓದುಗರಿಗೆ ಮನದಟ್ಟು ಮಾಡಿದ್ದಾರೆ. ಧರ್ಮಸ್ಥಳ ಸಂಸ್ಥೆ ಇದುವರೆಗೂ ವಿವಿಧ ಊರಿನ ಗ್ರಾಮಸ್ಥರ ಸಹಯೋಗದಲ್ಲಿ 363 ಕೆರೆಗಳ ಹೂಳು ತೆಗೆದು ‘ಜಲ ಸಂರಕ್ಷಣೆ’ ಮಾಡಿರುವುದು ಒಂದು ಉತ್ತಮ ಮಾದರಿ.

—ಜಿ. ಬೈರೇಗೌಡ, ಬೆಂಗಳೂರು

ಹಿಂದೆಲ್ಲ ಹಳ್ಳಿಯ ಜನರು ಕೆರೆಗಳನ್ನು ತಮ್ಮೂರ ಆಸ್ತಿಯಂತೆ ಕಾಪಾಡುತ್ತಿದ್ದರು. ಸರಕಾರವೇ ಸ್ವಚ್ಛವಾಗಿಟ್ಟುಕೊಳ್ಳಲಿ ಎನ್ನುತ್ತಿರಲಿಲ್ಲ. ಜನರ ಮನೋಭಾವ ಬದಲಾದ ಕಾರಣ ಹಳ್ಳಿಯ ಕೆರೆಗಳು ಹಾಳು ಸುರಿಯುತ್ತಿವೆ.

—ಕೊ.ಸು.ನರಸಿಂಹ ಮೂರ್ತಿ, ಮೈಸೂರು

ಕೆರೆ ಪುನಶ್ಚೇತನ ಕಾರ್ಯಕ್ರಮ ಶ್ಲಾಘನೀಯ. ಸರ್ಕಾರ ಮಾಡುವಷ್ಟು ಕೆಲಸವನ್ನು ವೀರೇಂದ್ರ ಹೆಗ್ಗಡೆಯವರು ಮಾಡುತ್ತಿದ್ದಾರೆ. ನಮ್ಮೂರಿನಲ್ಲೂ ಆರು ಎಕರೆ ಕೆರೆ ಹೂಳೆತ್ತಿ ಕೊಟ್ಟಿದ್ದು, ನಮಗೆ ಸಾಕಷ್ಟು ಅನುಕೂಲವಾಗಿದೆ. ನಮ್ಮೂರಿನ ಜಾನುವಾರುಗಳಿಗೆ ವರ್ಷದ ಎಲ್ಲಾ ಸಮಯದಲ್ಲೂ ಕುಡಿಯುವ ನೀರು ಸಿಗುತ್ತಿದೆ.

—ಹಂಚೀಪುರ ಕೆರೆ ಸಮಿತಿ, ಮೈಸೂರು

ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ಬಳ್ಳ ಎಂಬಂತೆ ಕೆರೆ ಕಲ್ಯಾಣದ ಲೇಖನ ಚೆನ್ನಾಗಿ ಮೂಡಿಬಂದಿವೆ. ಎಲ್ಲಾ ಹಳ್ಳಿ ಹಳ್ಳಿಗಳಲ್ಲಿ ಇದನ್ನು ಅಳವಡಿಸಿದರೆ ಜಲಕ್ಷಾಮ ಇರುವುದಿಲ್ಲ.

—ನರಸಿಂಹ ರಾವ್, ಬೆಂಗಳೂರು

ಬೇರೆ ಗ್ರಾಮದವರಿಗೂ ಸ್ಫೂರ್ತಿ ನೀಡುವ ಸಮಗ್ರ ಲೇಖನವಿದು. ಈ ಯೋಜನೆ ಜನರನ್ನು ಒಗ್ಗೂಡಿಸಿ ನಡೆಯುವುದರಿಂದ ಕೆರೆಯ ಬಗ್ಗೆ ಪ್ರೀತಿ, ಕಾಳಜಿ, ಭಾವನಾತ್ಮಕ ಸಂಬಂಧವನ್ನು ಬೆಸೆಯುತ್ತದೆ. ಇದು ಸ್ಥಳೀಯರು ಶಾಲೆ, ದೇವಸ್ಥಾನ, ಸಹಕಾರಿ ಸಂಘ, ಪರಿಸರ ಇವುಗಳ ಬಗ್ಗೆ ವಿಶೇಷ ಜವಾಬ್ದಾರಿ ವಹಿಸಲು ಪ್ರೇರೇಪಿಸುತ್ತದೆ.

—ಸೂರ್ಯನಾರಾಯಣ ಎಸ್. ಹೆಚ್. ಬೆಂಗಳೂರು, ಚಂದ್ರಶೇಖರ ಕಾಕಾಲ್ ಹೆಗ್ಗೋಡು, ಸಿ. ಎನ್. ಮಂಜಪ್ಪ ಹೊನ್ನೇಸರ, ಅಭಿನಂದನ ಎಸ್. ಪಾಟೀಲ್ ಗದಗ, ಸುರೇಶ್ ಮೈಸೂರು

## ಬಗೆದಷ್ಟೂ ಮಿಗುವ ಗಾಂಧಿ

‘ಬಗೆದಷ್ಟೂ ಮಿಗುವ ಮಹಾತ್ಮ’ (ಪಿ. ಶೇಷಾದ್ರಿ, ಅ. 7) ಲೇಖನ ರಿಚರ್ಡ್ ಅಟೆನ್ ಬರೋ ಅವರ ‘ಗಾಂಧಿ’ ಸಿನಿಮಾ ಬಗೆಗೆ ಒಂದು ಪಕ್ಷಿನೋಟವನ್ನು ನೀಡುತ್ತದೆ. ಸಿನಿಮಾಗಳನ್ನು ನೋಡುವ, ಆಸ್ವಾದಿಸುವ ಬಗೆಯನ್ನು ವಿವರಿಸಿದ್ದಾರೆ. ಈ ಸಿನಿಮಾವನ್ನು ಮತ್ತೆ ಮತ್ತೆ ನೋಡಲು ಆ ಮೂಲಕ ಗಾಂಧಿಯವರನ್ನು ಹೊಸ ರೀತಿಯಲ್ಲಿ ಅರ್ಥೈಸಿಕೊಳ್ಳಲು ಲೇಖಕರು ಪ್ರೇರೇಪಿಸಿದ್ದಾರೆ.

—ಜಿ.ಕೆ. ಕಂಚೀವರದಯ್ಯ, ಕೊಳಪಾಳ

ಶೇಷಾದ್ರಿ ಅವರ ಲೇಖನ ರೋಚಕವೆನಿಸಿತು. ‘ಗಾಂಧಿ’ ಅದ್ಭುತ ಚಲನಚಿತ್ರ. ಎಷ್ಟು ಸಾರಿ ನೋಡಿದರೂ ಮತ್ತೆ ಮತ್ತೆ ನೋಡಬೇಕೆನಿಸುತ್ತದೆ.

—ರಾಜಶೇಖರಗೌಡ, ಹರಪನಹಳ್ಳಿ

ವರ್ತಮಾನದಲ್ಲಿ ವನ್ಯಜೀವಿ ಸಂರಕ್ಷಣೆಯಲ್ಲಿ ತಂತ್ರಜ್ಞಾನದ ಕೊಡುಗೆ ವರದಾನವೆನಿಸಿದರೂ. ಮಾನವನ ಅನಿಯಂತ್ರಿತ ಹಸ್ತಕ್ಷೇಪ ದುರಾಸೆಗಳಿಂದಾಗಿ ವನ್ಯಜೀವಿಗಳ ಅನೇಕ ಸಂತತಿಗಳು ನಾಶವಾಗುವ ಅಪಾಯ ಇದ್ದೇ ಇದೆ.

—ರಾಮಚಂದ್ರ ಹೆಬ್ಬಾರ್, ಉಡುಪಿ

## ಸ್ಥಳೀಯ ಪ್ರತಿಭೆಗಳ ಬಗ್ಗೆ ಬರಲಿ

‘ಕಾಡಿನ ಒಡಲಿಗೆ ಟೆಕ್ ಕಣ್ಣು’ (ಅ.7) ಮತ್ತು ‘ನಮ್ಮೂರ ಕೆರೆಯ ಜಲಧರ್ಮ’ (ಅ.7) ಎಂಬ ಎರಡು ಲೇಖನಗಳು ಇಷ್ಟವಾದವು. ಇವಲ್ಲದೆ ಗಾಂಧಿ ಕುರಿತ ಲೇಖನ, ‘ಅಂಬಪಾಲಿ’ ಲೇಖನಗಳೂ ಮೆಚ್ಚುಗೆಯಾದವು. ಈ ಪತ್ರಿಕೆಯಲ್ಲಿ ಇನ್ನೂ ಕೆಲವು ವಿಷಯಗಳನ್ನು ಸೇರಿಸಿದರೆ ಚೆನ್ನಾಗಿರುತ್ತದೆ ಅನಿಸಿತು.

## ಕಾಡಿನ ಒಡಲಿಗೆ ಟೆಕ್ ಕಣ್ಣು

‘ಕಾಡಿನ ಒಡಲಿಗೆ ಟೆಕ್ ಕಣ್ಣು’ (ಗುರುರಾಜ್ ಎಸ್. ದಾವಣಗೆರೆ, ಅ. 7) ಲೇಖನದಲ್ಲಿ ತಂತ್ರಜ್ಞಾನದ ಬಳಕೆಯ ಒಳಿತು ಕೆಡುಕನ್ನು ವಿವರವಾಗಿ ಹೇಳಿದ್ದಾರೆ. ಎಂತಹುದೇ ಕಾನೂನು ಬಂದರೂ ಎಗ್ಗು ಸಿಗ್ಗಿಲ್ಲದೆ ನಡೆಯುತ್ತಿರುವ ಮಾನವನ ಅಟ್ಟಹಾಸಕ್ಕೆ ಶಾಶ್ವತ ಪರಿಹಾರ ಸಿಕ್ಕಿಲ್ಲದಿರುವುದು ಖೇದನೀಯ.

—ಬೆಂ. ಮು. ಮಾರುತಿ, ಬೆಂಗಳೂರು

ರೇಡಿಯೊ ಕಾಲರ್ ತಂತ್ರಜ್ಞಾನದ ಅಳವಡಿಕೆಯಿಂದ ಇತ್ತೀಚಿನ ಡ್ರೋನ್ ಬಳಕೆಯವರೆಗೆ ಹೀಗೆ ವಿವಿಧ ಡಿಜಿಟಲ್ ತಂತ್ರಜ್ಞಾನವು ವನ್ಯಜೀವಿಗಳ ಅಕ್ರಮ ಹತ್ಯೆ, ಕಾಡಿನ ಸಂಪತ್ತಿನ ಲೂಟಿ ತಡೆಯಲು ಹೇಗೆ ಸಹಕಾರಿ ಎನ್ನುವುದನ್ನು ವೈಜ್ಞಾನಿಕವಾಗಿ ತಿಳಿಸಿಕೊಟ್ಟಿದ್ದಾರೆ. ಇದರ ದುರ್ಬಳಕೆಯ ಬಗ್ಗೆ ಕೂಡ ಎಚ್ಚರಿಕೆ ನೀಡಿದ್ದಾರೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

ಮುಖಪುಟ ನೋಡಿದಾಗ ತುಂಬ ಆನಂದವಾಯಿತು. ವನ್ಯಜೀವಿರಕ್ಷಣೆಗಾಗಿ ಮಾಡುತ್ತಿರುವ ಪ್ರಯತ್ನ ತುಂಬ ಅದ್ಭುತವಾದುದ್ದು. ಇದು ನಮಗೆ ವನ್ಯಜೀವಿ ಸಂರಕ್ಷಣೆಯ ಬಗ್ಗೆ ಚಿಂತಿಸಲು ಪ್ರೇರಣೆ ನೀಡಿದೆ.

—ಫ್ಲೆವಿನ್ ಡಿಸೋಜ, ಬೆಂಗಳೂರು



ಕೊನೆಪುಟದಲ್ಲಿರುವ ‘ಸೆಲೆಬ್ರಿಟಿ’ ಅಂಕಣ ಓದಿದ ತಕ್ಷಣ ಒಂದು ಯೋಚನೆ ಉಕ್ಕಿ ನಿಲ್ಲುತ್ತದೆ. ನಮಗೆ ಗೊತ್ತೇ ಇಲ್ಲದ, ಗ್ರಾಮಾಂತರಗಳಲ್ಲಿ ನಂದಾದೀಪದಂತೆ ಬೆಳಗುತ್ತಿರುವ ಅಸಾಮಾನ್ಯರ ಬಗ್ಗೆಯೂ ತಿಳಿಯಬೇಕಲ್ಲ? ಇಂಥ ವ್ಯಕ್ತಿಗಳನ್ನು ಹುಡುಕುವ ಸಾಹಸವನ್ನು ‘ಸುಧಾ’ ಏಕೆ ಮಾಡಬಾರದು?

—ಮಾಲತಿ ಪಟ್ಟಣಶೆಟ್ಟಿ, ಧಾರವಾಡ

## ಉತ್ತಮ ಕಥೆ

‘ಬೇಸ್ತು’ (ನಾ. ದಾಮೋದರ ಶೆಟ್ಟಿ, ಅ.7) ಕಥೆ ಮೆಚ್ಚುಗೆಯಾಯಿತು. ಅನಿರೀಕ್ಷಿತ ತಿರುವು ಪಡೆದುಕೊಳ್ಳುವ ಕಥೆ, ಕಥಾನಾಯಕಿಯ ಜೊತೆಗೆ ಓದುಗರೂ ಬೇಸ್ತು ಬೀಳುವಂತೆ ಮಾಡುತ್ತದೆ.

—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

ಕಥೆ ಸೊಗಸಾಗಿದೆ. ಒಬ್ಬ ವ್ಯಕ್ತಿ ತನ್ನ ಕರ್ತವ್ಯನಿಷ್ಠೆಯಿಂದ ಮೇಲೇರಿದರೂ, ಹೊಟ್ಟೆ ಉರಿಪಡುವ ಜನ ಇದ್ದೇ ಇರುತ್ತಾರೆಂದು ಹೇಳಿದ ಹಾಗಾಯಿತು. ಕೊನೆಗೂ ಸುಖಾಂತ್ಯವಾದದ್ದನ್ನು ನೋಡಿ ನಿರಾಳವಾಯಿತು.

—ಉಷಾ ರಾಜಾರಾವ್, ಬೆಂಗಳೂರು

‘ಸ್ವಯಂ ಸೃಷ್ಟಿಸಿಕೊಂಡ ಅಗ್ನಿಪಂಜರದೊಳಗೆ’ (ರಘುನಾಥ ಚ.ಹ., ಅ. 7) ಎಂಬ ಶೀರ್ಷಿಕೆಯಲ್ಲಿ, ‘ನಿಮ್ಮೊಡನೆ’ ಪುಟದಲ್ಲಿ ಬರೆದ ಲೇಖನ ಸಕಾಲಿಕ. ಯೋಜನೆಯಿಲ್ಲದೆ ಅಳವಡಿಸಿಕೊಂಡಿರುವ ಸುರಕ್ಷತಾ ವಿಧಾನಗಳು ಕೆಲವೊಮ್ಮೆ ಭವಿಷ್ಯದಲ್ಲಿ ಅನಿರೀಕ್ಷಿತ ಅಪಾಯಗಳನ್ನು ತಂದೊಡ್ಡಬಹುದು.

—ಎಚ್. ಸಿದ್ದಾರ್ಥ, ಉಡುಪಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in